ಶ್ರೀ ವಿ. ಬಿ. ಜಕನೂರ್ .— ಇದೊಂದು ಕೇಸಿನಲ್ಲಿ ಮಾತ್ರ ನಿರಾಕರಿಸಲಾಗಿದೆ, ಉಳಿದವು ನನಗೆ ಗೊತ್ತಿಲ್ಲ. ಇದನ್ನು ಕಂದಾಯ ಇಲಾಖೆಯ ಅಧಿಕಾರಿಗಳ ಜೊತೆ ಮಾತನಾಡಿ ಬೇಗನೆ ಪರಿಹರಿಸುತ್ತೇನೆ.

K.S.R.T.C. its Income and Expenditure

548. SRI B. B. CHIMMANA KATTY (Badami).—Will the Minister for Transport and Minor Irrigation be pleased to state :—

(a) the amount of income and expenditure account of the K.S.R.T C. for the last three years ;

(b) the amount of income and expenditure of this Corporation from Bijapur Dis rict, for the last three years ; (details of each taluk may please be furnished) :

(c) whether t e facility of vehicles has been provided to the people of Bijapur District commensurate with the income ?

SRI M. M. J. SADYOJATHA (Minister for Transport and Minor Irrigation).—

(a)

Year	*Total income Rs. in lakhs*	*Expenditure*
1976-77	6498-90	6457-37
1977-78	6970-94	7155-43
1978-79	7599-08	7662-31

(b)

1976-77	619-23	575-40
1977-78	659-57	618-78
1978-79	763-85	691-82

As there are no K.S.R.T.C. depots in each Taluk of Bijapur Distrtct, (it is not possible to furnish the details of income and expenditure of each Taluk) details of 7 Taluks are laid on the table of the House. *

(c) Vehicles are not being provided on the basis of income. Vehicles are being provided on the of basis necessity and demands of passengers.

ಶ್ರೀ ಬಿ. ಬಿ. ಚಿಮ್ಮನಕಟ್ಟಿ. —ಸಾರಿಗೆ ಸಂಸ್ಥೆಯ ಆದಾಯ ಮತ್ತು ವೆಚ್ಚವನ್ನು ಕೇಳಿದ್ದಕ್ಕೆ ಸಾರಿಗೆ ಸಂಸ್ಥೆಗೆ ಹಾನಿಯಾಗಿದೆ ಎಂದು ತಿಳಿಸಿದ್ದೀರಿ. ಆ ಹಾನಿಯನ್ನು ತಪ್ಪಿಸುವುದಕ್ಕೆ ಏನಾದರೂ ಹೊಸ ಕಾರ್ಯಕ್ರಮವನ್ನು ಕೈಗೊಂಡಿದ್ದೀರಾ ?

---

* Copy placed in the Karnataka Legislature Library Vide No. 48 dated 31st July 1980.

ಶ್ರೀ ಎಂ. ಎಂ. ಜೆ. ಸದ್ಯೋಜಾತ. —ಸೂಕ್ತ ಕ್ರಮ ಕೈಗೊಂಡು ಚೆಕ್ಕಿಂಗೆ ಸ್ಕ್ವಾಡನ್ನು ನೇಮಿಸಿ ಚೆಕ್ ಮಾಡಿಸುತ್ತಿದ್ದೇವೆ.

ಶ್ರೀ ಬಿ. ಬಿ. ಚಿಮ್ಮನಕಟ್ಟಿ.—ಬಿಜಾಪುರ ಜಿಲ್ಲೆ ಸಾರಿಗೆ ಸಂಸ್ಥೆಗೆ ಹೆಚ್ಚಿನ ಆದಾಯವನ್ನು ಕೊಡತಕ್ಕ ಜಿಲ್ಲೆ. ಅದಕ್ಕೆ ತಕ್ಕಂತೆ ಅಲ್ಲಿಗೆ ಹೆಚ್ಚಿನ ಬಸ್ಸಿನ ಸೌಕರ್ಯಗಳನ್ನು ಒದಗಿಸುತ್ತೀರಾ ? ಬಿಜಾಪುರ ಜಿಲ್ಲೆಯ ಆದರಲ್ಲೂ ಬಾದಾಮಿಗೆ ಸೂಪರ್ ಡೀಲಕ್ಸ್ ಬಸ್ಸನ್ನು ಬಿಡುವುದಕ್ಕೆ ಅಗ್ರಹಪಡಿಸುತ್ತಿದ್ದರೂ ಇದುವರೆಗೆ ಕೊಟ್ಟಿಲ್ಲ. ಈಗಲಾದರೂ ಶೀಘ್ರವಾಗಿ ಕೊಡುವ ವ್ಯವಸ್ಥೆ ಮಾಡುತ್ತೀರಾ ?

ಶ್ರೀ ಎಂ. ಎಂ. ಜೆ. ಸದ್ಯೋಜಾತ.—ಆದಕ್ಕೆ ಈಗಾಗಲೇ ಆದೇಶ ಕೊಡಲಾಗಿದೆ.

ಶ್ರೀ ಬಿ. ಬಿ. ಚಿಮ್ಮನಕಟ್ಟಿ.—ನಮ್ಮ ಜಿಲ್ಲೆಗೆ ಹೆಚ್ಚಿನ ಬಸ್ಸುಗಳನ್ನು ಈ ವರ್ಷ ಕೊಡುತ್ತೀರಾ ?

ಶ್ರೀ ಎಂ. ಎಂ. ಜೆ. ಸದ್ಯೋಜಾತ.—ಪರಿಶೀಲನೆ ಮಾಡಿ ಆದಷ್ಟು ಬೇಗ ಒದಗಿಸಿ ಕೊಡುತ್ತೇವೆ.

Weavers Societies in Bijapur District

817. SRI V. V. PATTAR (Jamkhandi).—Will the Minister for Co-operation be pleased to state :—

(a) the number of weavers societies in Bijapur District especially in Rabkavi, Banahatti area ;

(b) out of them, how many are bogus societies ;

(c) whether the Government had made any investigation in this regard ;

(d) whether Government would take any steps to do away with these bogus societies ?

SRI A. B. JAKANUR (Minister for Co-operation).—

(a) There are 51 weavers societies in the Bijapur District. Of these 7 societies are located in Rabkavi and Banahatti Towns.

(b) None.

(c) Does not arise in view of reply above.

(d) -Do-

ಶ್ರೀ ವಿ. ವಿ ಪತ್ತಾರ್.—ನೇಕಾರರ ಸಂಘಗಳು ಒಟ್ಟು ೫೧ ಇವೆ ಎಂದು ಹೇಳಿದ್ದೀರಿ. ಅಷ್ಟು ಸಂಘಗಳು ಇರುವುದು ಆಮಾಲ್ಗಮೇಷನ್ ಆದ ಮೇಲೋ ಅಥವಾ ಅಮಾಲ್ಗಮೇಷನ್ ಆಗುವುದಕ್ಕೆ ಮೊದಲೋ ?

ಶ್ರೀ ಎ. ಬಿ. ಜಕನೂರ್.—ಆಮಾಲ್ಗಮೇಷನ್ ಆದ ಮೇಲೆ ೫೧ ಉಳಿದಿವೆ.

ಶ್ರೀ ವಿ ವಿ ಪತ್ತಾರ್ —ಹಾಗಾದರೆ ರಬಕವಿ ಮತ್ತು ಬನಹಟ್ಟಿ ಪ್ರದೇಶಗಳಲ್ಲಿರುವ ೭ ಸಂಘಗಳು ಎಷ್ಟಾದರೂ ಸಂಘಗಳನ್ನು ಒಳಗೊಂಡಿದ್ದವು ಮತ್ತು ಈಗ ಎಷ್ಟು ಸಂಘಗಳನ್ನು ಕೊಡಿ ಕೊಂಡಿವೆ.

ಶ್ರೀ ಎ. ಬಿ. ಜಕನೂರ್.—ರಬಕವಿ ಮತ್ತು ಬನಹಟ್ಟಿ ಪ್ರದೇಶಗಳಲ್ಲಿ ೨೨ ಸಂಘಗಳು ಇದ್ದವು. Out of 22 societies, 4 societies have been retained, 9 societies have been amalgamated with 3 societies, and 6 societies are proposed for liquidation.